**ಓ.ಎಸ್. ನಂಬರ್ಃ 74/2019** **ಡಿ ಡಬ್ಲೂಃ 4**

<u>ದಿಃ 01-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀಸವಾಲು:-</u>** ವಾದಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ-

ನಿ ಡಿ 1 ವಿಲ್ ಡೀಡ್ ನ್ನು ತಯಾರಿಸುವಾಗ ಕಕ್ಷಿದಾರರಿಗೆ ಆಸ್ತಿಯು ಹೇಗೆ ಬಂದಿದೆ ಎಂದು ಕೇಳಿಲ್ಲ. ಕಕ್ಷಿ ದಾರರು ಯಾವ ದಿನದಂದು ನನ್ನ ಕಡೆ ನಿ ಡಿ 1 ತಯಾರಿಸಲು ಬಂದಿದ್ದರು ಎಂದು ನೆನಪಿಲ್ಲ. ಆ ದಿನ ಇಬ್ಬರು ಸಾಕ್ಷಿದಾರರು ಮತ್ತು ಸರಸ್ವತಿ ಎಂಬುವವರು ನ್ಯಾಯಾಲಯದ ಆವರಣಕ್ಕೆ ಬಂದಿದ್ದರು. ಯಾವ ದಿನ ದಾಖಲಾತಿಯನ್ನು ತಯಾರಿಸಿರುತ್ತೇನೆ ನೆನಪಿಲ್ಲ. ಆ ದಿನ ಸಾಕ್ಷಿದಾರರು ಮತ್ತು ಕಕ್ಷಿದಾರರು ಎಲ್ಲಾ ದಾಖಲಾತಿಗಳನ್ನು ನೀಡಿದ್ದರು. ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿಗಳನ್ನು ನೋಡಿ ವಿಲ್ ನ್ನು ತಯಾರಿಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನ ನಿ ಡಿ 1 ನ್ನು ತಯಾರಿಸಿರುತ್ತೇನೆ ಅದೇ ದಿನ ನೋಂದಣಿ ಮಾಡಲಾಗಿದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಪಿ ಎಂದರೆ ಸರಿಯಿಲ್ಲ. ನಿ ಡಿ 1 ನ್ನು 08-02-2018 ರಂದು ತಯಾರಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ದಿ.09-02-2018 ರಂದು ನಿ ಡಿ 1 ದಾಖಲಾತಿಯು ನೊಂದಣಿಯಾಗಿದೆ ಎಂದರೆ ಸರಿ. ದಾಖಾಲಾತಿಯನ್ನು ತಯಾರಿಸಿದಾಗ ಸಾಕ್ಷಿದಾರರ ಹೆಸರೂ ಕೂಡ ಅದರಲ್ಲಿ ನಮೂದಿಸಿರುತ್ತೇನೆ. ಆ ದಿನ ನನಗೆ ಯಾವುದೇ ದಾಖಲಾತಿಗಳನ್ನು ನೀಡದೆ ಇರುವುದರಿಂದ ಮರುದಿನ ನಾನು ಕೈಯಿಂದ ಬರೆದಿರುತ್ತೇನೆ ಎಂದರೆ ಸಾಕ್ಷಿಯು ಕಕ್ಷಿದಾರರು ಮರುದಿನ ಬರುತ್ತೇವೆ ಎಂದು ತಿಳಿಸಿದರು ಆದರೆ ಬರದೇ ಇರುವುದರಿಂದ ವೈಟನರ್ ಹಚ್ಚಿ ಕೈಯಿಂದ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿ ಡಿ 1 ವಿಲ್ ಗೆ ಸಾಕ್ಷಿದಾರರು ಒಪ್ಪಲಿಲ್ಲ ಅದಕ್ಕೆ ನಾನು ವೈಟನರ್ ಹಚ್ಚಿ ಬೇರೆ ಸಾಕ್ಷಿದಾರರ ಹೆಸರನ್ನು ಬರೆದಿರುತ್ತೇನೆ ಎಂದರೆ ಸರಿ. ಸರಸ್ವತಿ ಯವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ಈ ವಿಷಯ ನಿ ಡಿ 1 ರಲ್ಲಿ ಕೈಯಿಂದ ಬರೆಯಲಾಗಿದೆ ಎಂದರೆ ಸರಿ. ಸರಸ್ವತಿ ಇವರಿಗೆ ಕಣ್ಣು ಕಾಣದೇ ಇರುವುದರಿಂದ ಸುಳ್ಳು ದಾಖಲಾತಿಯನ್ನು ಸೃಷ್ಟಿ ಪಡಿಸಿರುತ್ತೇನೆ ಎಂದರೆ ಸರಿಯಿಲ್ಲ. ವಿಲ್ ನಲ್ಲಿ ಇರುವ ಆಸ್ತಿ ಸರಸ್ವತಿಯವರಿಗೆ ತವರು ಮನೆಯಿಂದ ಬಂದಿದೆ ಎಂದರೆ ಗೊತ್ತಿಲ್ಲ.

(ಮರುವಿಚಾರಣೆ ಇಲ್ಲ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**